ದಿನಾಂಕ: 08-06-2026 ರಂದು ಸಾಕ್ಷಿಯನ್ನು ಪುನ: ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲು</u> <u>: ಪ್ರತಿವಾದಿ ಪರ ಶ್ರೀ.ಎ.ವಿ.ಕೆ ವಕೀಲರಿಂದ,</u>**

ವಾದಿ ನಂಃ2(ಎ) ರಿಂದ 2(ಸಿ) ರವರ ಹೆಸರಿನಲ್ಲಿ ದಾವಾ ಆಸ್ತಿ ಇರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ಅವರ ಹೆಸರಿನಲ್ಲಿ ಇರುವ ಆದಾರ ಕಾರ್ಡ್ ಗಳನ್ನು ಹಾಕಿರುತ್ತೇನೆ. ದಾವಾ ಆಸ್ತಿಯ ಮಾಲೀಕನು ನಾನು ಎಂದು ಯಾವುದೇ ದಾಖಲಾತಿಗಳನ್ನು ಹಾಜರುಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು ದಾವಾ ಆಸ್ತಿಯನ್ನು ದೊಡ್ಡ ಬಸಪ್ಪಾ ತಂದೆ ಹನುಮಂತಪ್ಪ ರವರ ಕಡೆಯಿಂದ ಖರೀದಿ ಮಾಡಿರುತ್ತಾರೆ. ದೊಡ್ಡ ಬಸಪ್ಪ ರವರ ಹೆಸರಿನಲ್ಲಿ ಸದರಿ ಆಸ್ತಿ ಇತ್ತು ಎಂದು ತೋರಿಸಲು ದಾಖಲಾತಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ಸದರಿ ಆಸ್ತಿ ದೊಡ್ಡ ಬಸಪ್ಪನ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ 1980 ರಲ್ಲಿ ಮರಣಹೊಂದಿರುತ್ತಾರೆ. ನನ್ನ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ಅವರ ಹೆಸರಿಗೆ ಹಕ್ಕು ಬದಲಾವಣೆ ಆಗಿರುತ್ತದೆ.

ಒತ್ತುವರಿ ಮಾಡಿದ ಬಗ್ಗೆ ಸರ್ವೆ ಆಗಿರುತ್ತದೆ. ಸರ್ವೆಯನ್ನು 2019 ರಲ್ಲಿ ನಾವೇ ಮಾಡಿರುತ್ತೇವೆ. ನಾನು ಸರ್ವೆಯರ್ ಮತ್ತು ಇಂಜಿನಿಯರ್ ರವರ ಕಡೆಯಿಂದ ಸರ್ವೆ ಮಾಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಮೆಸ್ತ್ರಿ ಕಡೆಯಿಂದ ಸರ್ವೆ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಮನೆಯನ್ನು ಮಾತ್ರ ಸರ್ವೆ ಮಾಡಿಸಿರುತ್ತೇನೆ. ಸರ್ವೆ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಂದಾಜಿನ ಮೇಲೆ 8 ಅಡಿ ಉತ್ತರ ದಕ್ಷಿಣ ಮತ್ತು 6 ಅಡಿ ಪೂರ್ವ ಪಶ್ಚಿಮ ಒತ್ತುವರಿಯಾಗಿದೆ ಎಂದು ತೋರಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯವರು ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಒತ್ತುವರಿ

ಮಾಡಿರುತ್ತಾರೆ ಎಂದು ಹೇಳಿಕೊಂಡಿರುತ್ತೇನೆ ಎಂದರೆ ಸರಿ. ಪಶ್ಚಿಮ ದಿಕ್ಕಿಗೆ ಪ್ರತಿವಾದಿಗಳ ಮನೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಪತ್ರದ ಅನುಸೂಚಿಯಲ್ಲಿ ಪಶ್ಚಿಮ ದಿಕ್ಕಿಗೆ ಜೇದಲಾಲ ರಂಗಪ್ಪ ರವರ ಮನೆ ಎಂದು ತೋರಿಸಿರುತ್ತೇನೆ ಎಂದರೆ ಸರಿ. ಪಶ್ಚಿಮ ದಿಕ್ಕಿಗೆ ಪ್ರತಿವಾದಿಗಳ ಮನೆ ಇಲ್ಲದೆ ಇರುವುದರಿಂದ ಅವರು ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಯಾವುದೇ ರೀತಿಯಾಗಿ ಒತ್ತುವರಿ ಮಾಡಲು ಸಾದ್ಯವಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿಯಲ್ಲಿ ಮನೆ ನಂಬರ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಮನೆ ನಂಬರ 180 ಎಂದು ದಾವಾ ಪತ್ರದಲ್ಲಿ ತೋರಿಸಿರುತ್ತೇನೆ. ಸದರಿ ಮನೆ ಪೂರ್ವ ಪಶ್ಚಿಮಕ್ಕೆ 6.5 ಗಜ ಮತ್ತು ಉತ್ತರ ದಕ್ಷಿಣ 9 ಗಜ ವಿಸ್ತೀರ್ಣ ಇರುತ್ತದೆ. ಸದರಿ ಆಸ್ತಿಯು 2 ನೇ ವಾರ್ಡ್ ನಲ್ಲಿ ಬರುತ್ತದೆ. ಸದರಿ ಆಸ್ತಿ 2 ನೇ ವಾರ್ಡ್ ನಲ್ಲಿ ಬರುತ್ತದೆ ಎಂದು ನನ್ನ ದಾವಾ ಪತ್ರದಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಮನೆಯಲ್ಲಿ ನಾವು ವಾಸವಾಗಿರುತ್ತೇವೆ. ಪ್ರತಿವಾದಿಗಳು ಸಹ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು ದಾವಾ ಹಾಕುವ ಕಾಲಕ್ಕೆ ಕಟ್ಟಿರುವುದಿಲ್ಲ ಈಗ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿಗಳು ನನ್ನ ಮೇಲೆ ಒಂದು ದಾವೆ ಸಲ್ಲಿಸಿದ್ದು ಅದು ಅವರ ಪರವಾಗಿ ಡಿಕ್ರಿ ಆಗಿರುತ್ತದೆ ಎಂದರೆ ಸರಿ.

ನನ್ನ ಪ್ರಮಾಣ ಪತ್ರದಲ್ಲಿ ಇರುವ ಮಾಹಿತಿಯನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಮುಂದುವರೆದ ಪ್ರಮಾಣ ಪತ್ರದಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಒತ್ತುವರಿ ಮಾಡಿ ಮನೆ ಕಟ್ಟಿರುತ್ತಾರೆ ಎಂಬ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಥವಾ ಉಳಿದ ವಾದಿಗಳು ದಾವಾ ಆಸ್ತಿಯ ಮಾಲೀಕರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯ ಸ್ವಾಧೀನದಲ್ಲಿ ಸಹ ಇರುವುದಿಲ್ಲ ಎಂದರೆ ಸರಿಯಲ್ಲ. ಇವತ್ತಿನವರೆಗೆ ನಾವು ದಾವಾ

ಆಸ್ತಿಯ ಸ್ವಾಧಿನದಲ್ಲಿ ಇರುತ್ತೇವೆ. ನಾವು ಹಾಕಿರುವ ಪ್ರಮಾಣಪತ್ರ ಸುಳ್ಳು ಇರುತ್ತದೆ, ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.